**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ ಕೊಪ್ಪಳ</u>**

ಸಿ.ಸಿ.ನಂಃ 2084/2021

CW ( 1 ) PW (01)

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 10-09-2025

| | |
|---|---|
| ಸಾಕ್ಷಿದಾರರ ಹೆಸರು | ಲಕ್ಕಪ್ಪ |
| ತಂದೆ ಹೆಸರು | ಭೀಮಪ್ಪ ಅಗ್ನಿ |
| ವಯಸ್ಸು | 44 ವರ್ಷ |
| ಉದ್ಯೋಗ | ಪಿ ಐ., ಸಿಐಡಿ ಧಾರವಾಡ |
| ವಾಸಸ್ಥಳ | ಧಾರವಾಡ |

ಪಿಸಿ ನಂ. 554 ಕೊಪ್ಪಳ ಗ್ರಾಮೀಣ ಠಾಣೆ ಇವರ ವಾಟ್ಸ್ ಅಫ್ ನ ವಿಡಿಯೋ ಕಾಲ್ ನ ಮುಖಾಂತರ ವಿಚಾರಣೆಯನ್ನು ಬೆರಳಚ್ಚು ಮಾಡಲಾಯಿತು.

**<u>ಮುಖ್ಯ ವಿಚಾರಣೆಃ ಸಸಅ ರವರಿಂದಃ</u>**

ನಾನು 2021 ರಿಂದ ಜೂನ್ 2022 ರವರೆಗೆ ಪಿ ಎಸ್ ಐ ಯಾಗಿ ಫಿರ್ಯಾದಿ ಠಾಣೆಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 27-10-2021 ರಂದು ಮ. 03.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ನನಗೆ ದೂರವಾಣಿ ಮೂಖಾಂತರ ಗಿಣೇಗೇರಾ ಗ್ರಾಮದ ಬಸ್ ನಿಲ್ದಾಣದ ಹತ್ತಿರ 1 ನೇ ಆರೋಪಿಯು ಅಕ್ರಮವಾಗಿ ಮಟಕ ಚೀಟಿ, ಬರೆಸುತ್ತಿರುವ ಬಗ್ಗೆ ಬಾತ್ಮಿ ಬಂದಿದ್ದು, ಅಕಾರಣ ನಾನು ಚಾಸಾ -4 ರಿಂದ 5 ರವರೆಗೆ ದಾಳಿಗೆ ನನ್ನೊಂದಿಗೆ ಬರಲು ಸೂಚಿಸಿದ್ದು, ಚಾಸಾ 5 ರವರಿಗೆ ಪಂಚರನ್ನು ಬರಮಾಡಿಕೊಂಡು ಬರುವಂತೆ ಹೇಳಿದ್ದು, ಅದರಂತೆ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಬಂದು ನನಗೆ ಪರಿಚಯಿಸಿದ್ದು, ಅವರಿಗೆ ದಾಳಿಗೆ ಹೋಗುವ ವಿಷಯವನ್ನು ತಿಳಿಸಿದ್ದು ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ.

ನಂತರ ಸಂಜೆ 04.00 ಗಂಟೆಗೆ ನಾನು ಮತ್ತು ಚಾಸಾ 2 ರಿಂದ 5 ರವರ ಜೊತೆ ಇಲಾಖೆ ಜೀಪುನಲ್ಲಿ ಠಾಣೆಯಿಂದ ಹೊರಟು ಸಂಜೆ 4.30 ರ ಸುಮಾರಿಗೆ ಗುನ್ನಸ್ಥಳದ ಸಮೀಪ ಸುಮಾರು 100 ಅಡಿ ದೂರದಲ್ಲಿ ಜೀಪನ್ನು ನಿಲ್ಲಿಸಿ ನಾವೆಲ್ಲರೂ ಕಾಲುನಡಿಗೆಯಲ್ಲಿ ಹೋಗಿ ನಿಂತು ನೋಡಲಾಗಿ 1 ನೇ ಆರೋಪಿಯು 1 ರೂ. ಗೆ 80 ರೂ. ಕೊಡುವುದಾಗಿ ಎಂದು ಕೂಗಿ ಕರೆಯುತ್ತಿದ್ದು, ನಂತರ ನಾನು ಮತ್ತು ಸಿಬ್ಬಂದಿಗಳು ಸಂಜೆ 04.40 ಕ್ಕೆ ದಾಳಿ ಮಾಡಿದ್ದು, ನಮ್ಮನ್ನು ನೋಡಿ ಅಲ್ಲಿ ಇದ್ದ ಜನರು ಓಡಿ ಹೋಗಿದ್ದು 1 ನೇ ಆರೋಪಿಯು ಸಿಕ್ಕಿ ಬಿದಿರುತ್ತಾನೆ.

ಅತನನ್ನು ಹಿಡಿದು ವಿಚಾರಿಸಿದಾಗ ಆತನ ಹೆಸರು ಶಂಕರ್ ನಾಯಕ ತಂದೆ ಸೋಮಪ್ಪ ರಠೋಡ ಎಂದು ತಿಳಿಸಿದ್ದು, ಅತನ ಬಳಿ ವಿಚಾರಿಸಿದಾಗ ಮಟಕ ಜೂಜಾಟ ಅಡಲು ಯಾವುದೇ ಪರವಾನಿಗೆಯನ್ನು

ಹೊಂದಿರಲಪಿಲ್ಲ. ನಂತರ ಅತನ ಬಳಿ ಒಂದು ಚೀಲದಲ್ಲಿ ಇದ್ದ ಈ ಕೆಳಕಂಡ ವಸ್ತುಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ವಶಪಡಿಸಿಕೊಂಡಿರುತ್ತೇನೆ.

| | |
|---|---|
| 1. | ಒಂದು ಮಟಕ ಚೀಟಿ, ಒಂದುಬಾಲ್ ಪೆನ್ನು ಮತ್ತು ನಗದು ಹಣ ರೂ. 1200/-. |

ಈ ಮೇಲಿನ ವಸ್ತುಗಳನ್ನು ಆರೋಪಿಯ ಬಳಿಯಿಂದ ಪಂಚರ ಸಮಕ್ಷಮ ಜಪ್ತಿಮಾಡಿಕೊಂಡು ಸಂಜೆ 04.45 ರಿಂದ 05.45 ರವರೆಗೆ ಚಾಸಾ 1 ರವರು ಪಂಚನಾಮೆಯನ್ನು ಬರೆದಿರುತ್ತಾರೆ. ನಂತರ ಠಾಣೆಗೆ ಬಂದು ಪ್ರಿಂಟ್ ನ್ನು ತೆಗೆದು ಪಂಚರ ಸಹಿ ಪಡೆದಿರುತ್ತ್ನೇನೆ. ಪಂಚನಾಮೆಯನ್ನು ಮುಗಿಸಿ ಸಂಜೆ 06.30 ಗಂಟೆಗೆ ಠಾಣೆಗೆ ಹಾಜರಾಗಿ ಚಾಸಾ 7 ರವರಿಗೆ ನನ್ನ ಗಣಕೀಕೃತ ಫಿರ್ಯಾದಿಯನ್ನು ನೀಡಿ, ಪಂಚನಾಮೆ ಮತ್ತು ಮುದ್ದೆಮಾಲುಗಳು ಹಾಗೂ 1 ನೇ ಆರೋಪಿಯ ಸಮೇತ ಅವರ ವಶಕ್ಕೆ ನೀಡಿರುತ್ತೇನೆ. ಮಟಕ ಚೀಟಿಯನ್ನು 2 ನೇ ಆರೋಪಿಗೆ ಕೊಡುವುದಾಗಿ 1 ನೇ ಆರೋಪಿ ತಿಳಿಸಿರುತ್ತಾನೆ.

ಸಾಕ್ಷಿಯು ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು ಸದರಿ ಫಿರ್ಯಾದಿಯನ್ನು ನಿಪಿ 1 ಎಂದು ಮತ್ತು ಅತನ ಸಹಿಯನ್ನು ನೀಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ 2 ಮತ್ತು ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಈ ಪ್ರಕರಣದ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ. 1 ರಿಂದ 03 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಗುನ್ನಜಾಗದಲ್ಲಿ ಬಾತ್ಮಿಯ ಬಗ್ಗೆ ದೂರವಾಣಿ ಕರೆಯನ್ನು ನಾನೇ ಸ್ವೀಕರಿಸಿರುತ್ತೇನೆ. ದಾಳಿಗೆ ಹೋಗುವ ಕುರಿತು ನಮ್ಮ ಠಾಣಾ ಡೈರಿಯಲ್ಲಿ ನಮೂದಿಸಿರುತ್ತೇವೆ. ನಮ್ಮ ಮೇಲಾಧಿಕಾರಿಗೆ ತಿಳಿಸಿರುವುದಿಲ್ಲ. ಅನುಮತಿ ಪಡೆದ ವಿಷಯ ನನ್ನ ದೂರನಲ್ಲಿ ತಿಳಿಸಿರುತ್ತೇನೆ. ಗುನ್ನಜಾಗದಿಂದ ನಮ್ಮ ಸರ್ಕಾರಿ ವಾಹನವನ್ನು 100 ಮಿಟರ್ ಅಂತರದಲ್ಲಿ ಬಿಟ್ಟಿದ್ದೇವು. ವಾಹನವನ್ನು ನಿಲುಗಡೆ ಮಾಡಿದ ವಾಹನದ ಚಕ್ಕುಬಂದಿ ನನಗೆ ನೆನಪಿಲ್ಲ. ನಾವು ಆರೋಪಿತರನ್ನು 100 ಮಿಟರಿ ಅಂತರದಲ್ಲಿ ಪರಿಶೀಲನೆ ಮಾಡಿದಾಗ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಓಡಿ ಹೋದವರ ಬಗ್ಗೆ ನಾವು ವಿಚಾರಣೆಯನ್ನು ಮಾಡಿರುವುದಿಲ್ಲ. ಓಡಿ ಹೋದವರನ್ನು ಮುಂದೆ ಪತ್ತೆ ಹಚ್ಚಲು ನಾವು ಕ್ಷಣಕ್ಕೆ ಯಾವುದೇ ವಿಡಿಯೋವನ್ನು ಮಾಡಿಕೊಂಡಿರುವುದಿಲ್ಲ. ಬಸ್ ನಿಲ್ದಾಣದಲ್ಲಿ ಸಾಕಷ್ಟು ಜನ ಹೋಗುವುದು ಬರುವುದು ಮಾಡುತ್ತಿರುತ್ತಾರೆ ಎಂದರೆ ಸರಿ. ಓಡಿ ಹೋದವರನ್ನು ಹಿಡಿಯಲು ನಾನು ಪ್ರಯತ್ನ ಮಾಡಿರುವುದಿಲ್ಲ. ವಶಪಡಿಸಿಕೊಂಡ ಪೆನ್ನಿನ ಕಂಪನಿ ಯಾವುದು ಎಂದು ನಾನು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಮಟಕ ಚೀಟಿಯ ಬರವಣಿಗೆಯ ಶಾಹಿಯು ಮತ್ತು ನಾನು ಅಮಾನತುಪಡಿಸಿಕೊಂಡ ಪೆನ್ನಿಗೂ ಹೊಂದಾಣಿಕೆ ಮಾಡಿ ನೋಡಿರುವುದಿಲ್ಲ. ಮಟಕ ಚೀಟಿಯು ಆರೋಪಿಯ ಯಾವ ಜೇಬಿನಲ್ಲಿ ಇತ್ತು ಎಂದು ನಾನು ನೋಡಿರುವುದಿಲ ಅದಿನ ಆರೋಪಿ ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದನು ಎಂದು ಈಗ ನೆನಪು ಇಲ್ಲ ಆರೋಪಿ ನಂ2 ರವರ ಬಗ್ಗೆ ನನ್ನ ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ ಅದರೇ ಅವರ ಬಗ್ಗೆ ಪರಿಶೀಲಬನೆ

ಮಾಡಿರುವುದಿಲ್ಲ. ಮುನಿರಾಬಾದ್ ನಲ್ಲಿ ಸಾಕಷ್ಟು ಅಸಾಂ ಎನ್ನುವರು ಸಿಗುತ್ತಾರೆ ಎಂದರೆ ಸರಿ. 1ನೇ ಆರೋಪಿ ಹೇಳಿರುವ 2ನೇ ಆರೋಪೀವರೇ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. 2ನೇ ಆರೋಪಿಯನ್ನು ಇದೆ ಮೊದಲ ಬಾರಿ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿ. 1 ಮತ್ತು 2ನೇ ಆರೋಪಿತರನ್ನು ಈ ನ್ಯಾಯಾಲಯದ ಮುಂದೆ ಇದೇ ದಿನ ಗುರುತಿಸಿರುತ್ತೇನೆ ಎಂದರೆಸರಿ ಅದರೇ 2ನೇ ಆರೊಪಿಯನ್ನು ನಾನು ದಸ್ತಗಿರಿ ಮಾಡಿರುವುದಿಲ್ಲ. ಈ ಪ್ರಕರಣದ ಪಂಚರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಪಂಚನಾಮೆಯನ್ನು ಚಾಸಾ 5 ರವರು ಬರೆದಿರುತ್ತಾರೆ. 1200 ಹಣದ ಮುಖಬೆಲೆಯನ್ನು ನಾನು ದೂರಿನಲ್ಲಿ ಮತ್ತು ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ. 1ನೇ ಆರೋಪಿಯ ಮಾತು ಕೇಳಿ 2ನೇ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 2 ಅರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಇಲಾಖೆ ಅಂಕಿ ಅಂಶಗೋಸ್ಕರ ಸುಳ್ಳು ಕೇಸು ದಾಖಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಮತ್ತು ಅರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ.ಜೆ ಎಂ ಎಫ್ ಸಿ ಕೊಪ್ಪಳ.